# ಓಡಿ ಬಾರಯ್ಯ ವೈಕುಂಠಪತಿ ನಿನ್ನ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page no. 59.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page no. 156.
3. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page no. 49.
4. **Note:** Lyrics mentioned without highlights are as per Ref. 1 and the wordings given in yellow highlights are as per Ref. 2. The wordings given in green highlights are as per Ref. 3.
5. **Note:** Singer has followed a mix of lyrics from Ref. 1 and Ref. 2.

ರಾಗ: ಭೈರವಿ ತಾಳ: ಆದಿ

ಓಡಿ ಬಾರಯ್ಯ ವೈಕುಂಠಪತಿ ನಿನ್ನ
ನೋಡುವೆ ಮನದಣಿಯೆ || ಪ ||

ನೋಡಿ ಮುದ್ದಾಡಿ ಮಾತಾಡಿ ಸಂತೋಷದಿ
ಪಾಡಿ ಪೊಗಳುವೆನು ಪರಮ ಪುರುಷ ಹರಿ || ಅಪ ||

ಕೆಂದಾವರೆಯಂತೆ ಪಾದಂಗಳೆರಡು
ಅಂದುಗೆ ಕಿರುಗೆಜ್ಜೆ ಘಲು ಘಲುರೆನುತ
ಚೆಂದದಿ ಪೀತಾಂಬರವಲೆದಾಡುತ
ಕುಂದಣದುಡುದಾರ ಝಣ ಝಣ ಝಣಕುತ || ೧ ||

ಕೋಟಿ ಸೂರ್ಯ ಪ್ರಕಾಶಗಳಿಂದಲಿ ಲ-
ಲಾಟದಲ್ಲಿ ಇಟ್ಟ ಕಸ್ತೂರಿ ತಿಲಕ
ಕೂಟದ ಗೋಪಾಂಗನೆಯರ ಕೂಡೆ
ಆಟ ಸಾಕು ಬಾರೋ ಅರವಿಂದ ನಯನ || ೨ ||

ಕಿರು ತುರುಬಿನ ಮೇಲೆ ಒಲೆವುತಿರುತಿರೆ
ಮರುಗ ಮಲ್ಲಿಗೆ ಜಾಜಿ ಶ್ರೀ ತುಳಸಿ
ಕರದಲಿ ಪಿಡಿದಾ ಪೊಂಗಳಲೂದುತ
ತಿರಿತಿಂದು ಬಾಹೋ ಸಡಗರ ಸಾಕೋ || ೩ ||

ರಾಗ: ಭೈರವಿ ತಾಳ: ಆದಿ

ಓಡಿ ಬಾರೈ ವೈಕುಂಠಪತಿ ನಿನ್ನ
ನೋಡುವೆ ಮನದಣಿಯೆ

ಕಾಡಬೇಡವೋ ಕರುಣಾಕರ ನಿನ್ನ
ಬೇಡಿಕೊಂಬೆನೊ ರಂಗಯ್ಯ ಬೇಗ

ಕೆಂದಾವರೆ ಪೋಲ್ವ ಪಾದಗಳಿಂದ ರಂಗ
ಧಿಂ ಧಿಮಿ ಧಿಮಿಕೆಂದು ಕುಣಿಯುತಲಿ
ಅಂದುಗೆ ಕಿರುಗೆಜ್ಜೆ ನಲಿದಾಡುತ ಬಾರೋ
ಅರವಿಂದ ನಯನ ಗೋವಿಂದ ನೀ ಬಾರೋ

ಎಣ್ಣೋರಿಗತಿರಸ ದಧಿ ಘೃತವೊ ರಂಗ
ಎನ್ನಯ್ಯ ನಿನಗೆ ಕೊಡುವೆ ಬಾರೊ
ಚಿಣ್ಣರ ಒಡನಾಟ ಸಾಕು ಬಿಡೋ ಈಗ
ಬೆಣ್ಣೆಯ ಮೆಲುವುದು ಬೇಡವೊ ಕಂದ

ತುರುಬಿನ ಮೇಲೆ ನಲಿಯುತಲಿರುತಿಹ ಚೆಲ್ವ
ಮರುಗ ಮಲ್ಲಿಗೆ ಜಾಜಿ ತುಳಸಿಯ ದಂಡೆ
ಕರದಲ್ಲಿ ಪಿಡಿದಿಹೆ ಮುತ್ತಿನ ಚೆಂಡು ಬಲು
ಸರಸದಿಂದಲಿ ನೀ ನಲಿದಾಡುತ ಬಾರೋ

| | |
|---|---|
| ಎಣ್ಣೂರಿಗತಿರಸ ಸದಮಲ ದೋಸೆ ಬೆಣ್ಣೆ | ಕೋಟಿ ಸೂರ್ಯ ಪ್ರಕಾಶದಂತೆ ಕಿ |
| ಅಣ್ಣಯ್ಯ ನಿನಗೆ ಕೊಡುವೆನೊ ಬಾರೋ | ರೀಟ ಕುಂಡಲ ಬಾವುಲಿ ಹೊಳೆಯೆ ಲ |
| ಕಣ್ಣು ಮುಚ್ಚಿ ಗೋಪಾಂಗನೆಯರ ಕೂಡಿ | ಲಾಟ ಕಸ್ತೂರಿ ತಿಲಕ ಇಡುವೆ ರಂಗ |
| ಬೆಣ್ಣೆಯ ಮೆಲುವುದು ಉಚಿತವೆ ಸಾಕೋ    || ೪ || | ಕೂಟ ಗೋಪಾಲರ ಆಟ ಸಾಕೋ ಈಗ |
| | |
| ಮಂಗಳಾತ್ಮಕ ಮೋಹನಾಕಾರನೆ | ಮಂಗಳಾತ್ಮಕ ಮೋಹನ ಕಾಯ ರಂಗ |
| ಸಂಗೀತಲೋಲ ಸದ್ಗುಣ-ಶೀಲ | ಸಂಗೀತಲೋಲ ಸದ್ಗುಣ-ಶೀಲ |
| ಮಂಗಳೆ ಲಕುಮಿಯ ಸಹಿತವಾಗಿ ಬಂದು | ಅಂಗನೆಯರಿಗೆಲ್ಲ ಅತಿ ಪ್ರಿಯನಾದ ಶುಭ |
| ಕಂಗಳ ಮುಂದಾಡೊ ಪುರಂದರ ವಿಠಲ    || ೫ || | ಮಂಗಳ ಮೂರುತಿ ಪುರಂದರ ವಿಠಲ |

**Note:** The lyrics given below in green highlights are as per Ref. 3 above.

ರಾಗ: ಭೈರವಿ      ತಾಳ: ಆದಿ

ಒಡಿ ಬಾರೊ ಶ್ರೀ ವೈಕುಂಠಪತಿ ನಿನ್ನ
ನೋಡುವೆ ಮನದಣಿಯೆ || ಪ ||

ನೋಡಿ ಮುದ್ದಾಡಿ ಮಾತಾಡಿ ಸಂತೋಷಗೂಡಿ
ಪಾಡಿ ಪೊಗಳುವೆನು ಪರಮ ಪುರುಷ ಹರಿ || ಅಪ ||

ಕೆಂದಾವರೆ ಪೋಲ್ವ ಪಾದಗಳಿಂದ ರಂಗ
ಧಿಂ ಧಿಮಿ ಧಿಮಿಕೆಂದು ಕುಣಿಯುತಲಿ
ಅಂದಿಗೆ ಕಿರುಗೆಜ್ಜೆ ಘಲು ಘಲುರೆನ್ನುತ
ಚೆಂದದಿ ಪೀತಾಂಬರ ನಲಿದಾಡುತ || ೧ ||

ಕೋಟಿ ಸೂರ್ಯ ಪ್ರಕಾಶದಂತೆ ಕಿ-
ರೀಟ ಕುಂಡಲ ಬಾವುಲಿ ಪೊಳೆಯೆ ಲ-
ಲಾಟದಿ ಕಸ್ತೂರಿ ತಿಲಕವಿಡುವೆ ರಂಗ
ಕೂಟ ಗೋಪಾಲರ ಆಟ ಸಾಕೋ ಈಗ || ೨ ||

ಎಣ್ಣೂರಿಗತಿರಸ ದಧಿ ಘೃತವೊ ರಂಗ
ಎನ್ನಯ್ಯ ನಿನಗೆ ಕೊಡುವೆ ಬಾರೊ
ಚಿಣ್ಣರ ಒಡನಾಟ ಸಾಕು ಬಿಡೋ ರಂಗ
ಬೆಣ್ಣೆಯ ಮೆಲುವುದು ಬೇಡ ಎನ್ನ ಕಂದ || ೩ ||

ತುರುಬಿನ ಮೇಲೆ ನಲಿಯುತಲಿರುತಿಹ
ಮರುಗ ಮಲ್ಲಿಗೆ ಜಾಜಿ ತುಳಸಿಯ ದಂಡೆ
ಕರದಲಿ ಪಿಡಿದು ಪೊಂಗಳಲನೆ ಊದುತ
ಸರಸದಿಂದಲಿ ನೀ ನಲಿ ನಲಿದಾಡುತ || ೪ ||

ಮಂಗಳಾತ್ಮಕ ಮೋಹನ ಕಾಯ ರಂಗ
ಸಂಗೀತಲೋಲ ಸದ್ಗುಣ-ಶೀಲ
ಅಂಗನೆಯರಿಗೆಲ್ಲ ಅತಿ ಪ್ರಿಯನಾದ ಶು-
ಭಾಂಗ ಪುರಂದರ ವಿಠಲ ರಾಯ || ೫ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಪೂಜೆಯನ್ನು ಆರಂಭಿಸುವ ಮೊದಲು ಇಷ್ಟ ದೈವತ ಎಂದರೆ ಪರಮಾತ್ಮನನ್ನು ಮನಸಾ ಕರೆಯುವುದೇ ಆವಾಹನ. ಷೋಡಶೋಪಚಾರ ಪೂಜೆಗಳಲ್ಲಿ ಆವಾಹನದಿಂದಲೇ ಮೊದಲಾಗುತ್ತದೆ.

**ಕುಂದಣದ** = ರತ್ನ ಕೆಚ್ಚಿದ

**ಕೂಟದ** = ಒಡನಾಡಿಗಳಾದ

**ತಿರಿತಿಂದು ಬಾಹೋ** = ಮನೆ ಮನೆ ತಿರುಗಾಡಿ ತಿಂದು ಬರುವ

**ಎಣ್ಣೋರಿಗೆ** = ಎಣ್ಣೆಯ + ಹೂರಿಗೆ : ಎಣ್ಣೆಯಲ್ಲಿ ಕರಿದು ಮಾಡಿದ ಒಂದು ಭಕ್ಷ

**ಅತಿರಸ** = ಅನಾರಸ

**ಸದಮಲ** = ಸ್ವಚ್ಛವಾದ

**ಕಣ್ಣು ಮುಚ್ಚಿ** = ಗುಟ್ಟಾಗಿ

**ಮಂಗಳಾತ್ಮಕ** = ಕಲ್ಯಾಣ ರೂಪನಾದವ

**Classification:** Keerthane
**Ankita:** purandara vittala
**Location:** NA
**Category:** binnaha, navaratna mAlike, Pooja Tatva
**Sub-Category:** Vishnu, paramatma, Vaikunta, mana, padma, gejje, surya, Kasturi, tuppa, ranga, hoovu, tulasi, kolalu, kannu, benne, mangala, shubha, sangeetha, Lakshmi,
**Pravachana:** NA
**Explanation:** NA